



ವೆಲ್ವೆಟ್ ಸೀರೆಗಳು ಇತರ ಫ್ಯಾಬ್ರಿಕ್ ಸೀರೆಗಳನ್ನು ಮೀರಿಸುವ ಆಕರ್ಷಕ ಬಣ್ಣ, ವಿನ್ಯಾಸಗಳಲ್ಲಿ ಕಂಗೊಳಿಸುತ್ತಿದ್ದು, ಎಲ್ಲರ ಗಮನಸೆಳೆಯುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಗಾಢ ವರ್ಣಗಳಾದ ಕೆಂಪು, ನೀಲಿ, ಹಸಿರು ಮತ್ತು ಕಪ್ಪುಬಣ್ಣಗಳು ವೆಲ್ವೆಟ್‌ನಲ್ಲಿ ಹೆಚ್ಚಾಗಿ ಟ್ರೆಂಡಿಯಾಗಿವೆ. ಇವುಗಳ ಜೊತೆಗೆ ಮೆಟಾಲಿಕ್ ಲುಕ್ ಕೂಡ ಈ ಸೀರೆಯ ಸೌಂದರ್ಯವನ್ನು ಇಮ್ಮಡಿಸಿವೆ. ಸ್ಟೈಲಿಷ್ ಲುಕ್ ನೀಡುವ ರವಿಕೆ ಟ್ರೈ ಮಾಡಬಹುದು. ಹೈ ನೆಕ್, ಬೋಟ್ ನೆಕ್, ಫುಲ್ ಸ್ಲೀವ್ ಬ್ಲೌಸ್‌ಗಳು ವೆಲ್ವೆಟ್ ಸೀರೆಯೊಂದಿಗೆ ಚೆನ್ನಾಗಿ ಒಪ್ಪುತ್ತವೆ. ಹಾಗೇ ವಸ್ತ್ರವಿನ್ಯಾಸಕಾರರು ವೆಲ್ವೆಟ್ ಸೀರೆಗಳಲ್ಲಿಯೇ ವಿಭಿನ್ನ ವಿನ್ಯಾಸಕ್ಕೆ ಒತ್ತು ನೀಡುತ್ತಿದ್ದಾರೆ. ವೆಲ್ವೆಟ್ ಸೀರೆಯ ಅರ್ಧ ಭಾಗ ಸಾಮಾನ್ಯ ಬಟ್ಟೆಯದಾಗಿದ್ದರೆ ಇನ್ನರ್ಧ ಭಾಗ ಅದಕ್ಕೆ ಒಪ್ಪುವ ಕಾಂಟ್ರಾಸ್ಟ್ ವೆಲ್ವೆಟ್ ಬಟ್ಟೆಗಳನ್ನು ಉಪಯೋಗಿಸುವುದು ಇಲ್ಲವೇ ಸೀರೆಯ ಅಂಚು ಮತ್ತು ಸೆರಗಿಗೆ ಮಾತ್ರ ವೆಲ್ವೆಟ್ ಬಳಸುವುದರಿಂದ ಆ ಬಟ್ಟೆಗಳಿಗೆ ಒಂದು ವಿಶೇಷ ಲುಕ್ ಬರುತ್ತದೆ.

ವೆಲ್ವೆಟ್ ಬಟ್ಟೆಗಳಿಂದ ತಯಾರಾದ ಚೋಲಿಗಳೂ ಸಾಕಷ್ಟು ಟ್ರೆಂಡಿಯಾಗಿವೆ. ಇವುಗಳನ್ನು ಶುಭ ಸಮಾರಂಭಕ್ಕೆ ಹೋಗುವಾಗ ತಮಗಿಷ್ಟವಾದ ಸೀರೆಯ ಮೇಲೆ ಧರಿಸಬಹುದಾಗಿದೆ. ಒಂದು ಸಾಮಾನ್ಯ ಸೀರೆಯ ಜೊತೆ ಈ ವೆಲ್ವೆಟ್ ಚೋಲಿಗಳನ್ನು ಧರಿಸಿದರೂ ಕೂಡ ಅದು ನಿಮಗೆ ರಾಯಲ್ ಲುಕ್ ನೀಡುತ್ತದೆ. ಇನ್ನು ಯುವತಿಯರಂತೂ ವೆಲ್ವೆಟ್ ಗೌನ್, ಗ್ರ್ಯಾಂಡ್ ಲುಕ್ ನೀಡುವ ಗಾಗ್ರಾದ ಮೇಲೆ ವೆಲ್ವೆಟ್ ಬ್ಲೌಸ್ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ.

## ಮಕ್ಕಳ ಉಡುಪಿಗೂ ವೆಲ್ವೆಟ್!

ಬರೀ ವಯಸ್ಕರಿಗೆ ಮಾತ್ರವಲ್ಲದೆ ಚಿಕ್ಕ ಮಕ್ಕಳ ಬಟ್ಟೆಗಳಿಗೂ ಈಗ ವೆಲ್ವೆಟ್ ಬಳಕೆ ಸಾಮಾನ್ಯವಾಗಿದೆ. ಹಾಗೇ ಮಕ್ಕಳ ಫ್ರಾಕ್‌ಗಳಿಗೆ, ಅದರ ಫ್ರಿಲ್ಸ್‌ಗಳಿಗೆ, ಅದರ ಅಂಚುಗಳಿಗೆ, ಸ್ಲೀವ್‌ಗಳಿಗೆ ವೆಲ್ವೆಟ್‌ನಿಂದ ಅಲಂಕರಿಸಿ ಅದಕ್ಕೆ ಒಂದು ಅಂದವಾದ ರೂಪ ಕೊಡುತ್ತಿದ್ದಾರೆ. ಇದರಿಂದ ಚಿಕ್ಕಮಕ್ಕಳೂ ವೆಲ್ವೆಟ್‌ನ ಆಕರ್ಷಣೆಗೆ ಒಳಗಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ವೆಲ್ವೆಟ್ ಮಾಡರ್ನ್ ಬಟ್ಟೆಗಳಿಗೂ ಸೈ ಹಾಗೂ ಸಾಂಪ್ರದಾಯಿಕ ಬಟ್ಟೆಗಳಿಗೂ ಸೈ ಎನ್ನುವ ರೀತಿಯಲ್ಲಿ ಎರಡಕ್ಕೂ ಹೊಂದಿಕೊಂಡಿದೆ. ಇನ್ನು ಈ ವೆಲ್ವೆಟ್‌ನಿಂದ ತಯಾರಾದ ಉಡುಪುಗಳು ಪಾರ್ಟಿವೇರ್ ಎಂದೇ ಖ್ಯಾತಿ ಪಡೆದಿವೆ. ಬರೀ ವೆಲ್ವೆಟ್ ಬಟ್ಟೆಗಳಿಂದ ತಯಾರಿಸಿದ ಉಡುಪುಗಳು ಅತ್ಯಂತ ಭಾರವಾಗಿರುತ್ತವೆ. ಈ ಕಾರಣದಿಂದ ಇವುಗಳಲ್ಲಿಯೇ ಲೈಟ್ ವೇಟ್‌ನ ವೆಲ್ವೆಟ್ ಬಳಸಲಾಗುತ್ತಿದೆ ಇಲ್ಲವೇ ಸಾಮಾನ್ಯ ಬಟ್ಟೆಯ ಜೊತೆ ಮಿಕ್ಸ್ ಆ್ಯಂಡ್ ಮ್ಯಾಚ್ ಮಾಡಿ ಉಪಯೋಗಿಸಲಾಗುತ್ತಿದೆ.

ವೆಲ್ವೆಟ್ ಬಟ್ಟೆಗಳಲ್ಲಿ ಸಾಕಷ್ಟು ಬಣ್ಣಗಳು ದೊರೆಯುವುದರಿಂದ ಅವುಗಳನ್ನು ಮಿಕ್ಸ್ ಮ್ಯಾಚ್ ಮಾಡಿ ಉಡುಪುಗಳನ್ನು ತಯಾರಿಸುತ್ತಿದ್ದಾರೆ. ಯುವತಿಯರು ಪಾರ್ಟಿಗಳಿಗೆ ಹೋಗುವಾಗ ಜೀನ್ಸ್ ಮೇಲೆ ವೆಲ್ವೆಟ್‌ನ ಟಾಪ್, ಕುರ್ತಾ ಧರಿಸುತ್ತಿದ್ದಾರೆ. ಹಾಗೆಯೇ ಸಲ್ವಾರ್, ಗೌನ್ ಕೂಡ ಟ್ರೆಂಡಿಯಾಗಿವೆ. ಈ ತರಹದ ಉಡುಪುಗಳು ಪಾರ್ಟಿಗಳಲ್ಲಿ ಒಂದು ವಿಶೇಷ ಲುಕ್ ನೀಡುತ್ತವೆ. ರ್‍ಯಾಂಪ್ ಮೇಲೆ ಮಾಡೆಲ್‌ಗಳು ವೆಲ್ವೆಟ್‌ನಲ್ಲಿ ತಯಾರಾದ ವೆರೈಟಿ ಉಡುಪುಗಳನ್ನು ಧರಿಸಿ ಎಲ್ಲರ ಗಮನಸೆಳೆಯುತ್ತಿದ್ದಾರೆ. ಬಾಲಿವುಡ್ ತಾರೆಯರಂತೂ ಸಭೆ ಸಮಾರಂಭಗಳಲ್ಲಿ ವೆಲ್ವೆಟ್‌ನ ಗೌನ್, ಸೀರೆ ಹಾಗೂ ವಿವಿಧ ವಿನ್ಯಾಸದ ಡ್ರೆಸ್‌ಗಳನ್ನು ಧರಿಸಿ ಎಲ್ಲರನ್ನೂ ಆಕರ್ಷಿಸುತ್ತಿದ್ದಾರೆ. ■